**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ  ನ್ಯಾಯಾಲಯ ಕುಂದಗೋಳ**

**ಸಿಸಿ  ನಂಃ 51/2016**

**ಸಿ ಡಬ್ಲೂಃ1  ಪಿ ಡಬ್ಲ್ಯೂಃ35....**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 15.04.2026**

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ  ವಕೀಲರಿಂದ 2 ಮತ್ತು 15 ನೇ ಆರೋಪಿತರ  ಪರ ವಕೀಲರುಃ**

1. ಎಮ್.ಎನ್.ಆರ್ ಸ್ಕೀಮ್ ಅಡಿಯಲ್ಲಿ ಸ್ಯಾಂಕ್ಷನ್ ಆಗಿ ಹಣ ಬರುವ ಕ್ರಮದ ಬಗ್ಗೆ ನನಗೆ ಮಾಹಿತಿ ಇದೆ. ಆ ರೀತಿ ಹಣ ಮಂಜೂರಾತಿ ಬಂದ ನಂತರ ತಾಂತ್ರಿಕ ತಾಲ್ಲೂಕಾ ಪಂಚಾಯತ ಇಂಜಿನೀಯರ್ ಇವರು ಅದನ್ನು ಅನುಮೋದಿಸುತ್ತಾರೆ. ಈ ರೀತಿ ಅನುಮೋದನೆ ಆದ ಬಗ್ಗೆ ದಾಖಲೆಗಳು ಇರುತ್ತವೆ. ಆ ಬಗ್ಗೆ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಈ ರೀತಿ ತಾಂತ್ರಿಕ ಅನುಮೋದನೆಯಾದ ನಂತರ ಗ್ರಾಮ ಪಂಚಾಯತ ಅಧ್ಯಕ್ಷರು ಆಡತಿತಾತ್ಮಕ ಮಂಜೂರಾತಿಯನ್ನು ನೀಡುತ್ತಾರೆ. ಈ ಪ್ರಕಾರ ಅನುಮೋದನೆಯಾದ ನಂತರ ರಸ್ತೆ ಕಾಮಗಾರಿ ಪ್ರಾರಂಭವಾಗುತ್ತದೆ. ಸದರಿ ರಸ್ತೆ ಕಾಮಗಾರಿ ಬಗ್ಗೆ ಮೇಲ್ವಿಚಾರಣೆಯನ್ನು ಪಿ.ಡಿ.ಓ ಸಂಬಂದಪಟ್ಟ ಗ್ರಾಮ ಪಂಚಾಯತ ಇವರು ಮಾಡುತ್ತಾರೆ. ಪಿ.ಡಿ.ಓ ರವರು ಸದರಿ ರಸ್ತೆ ಕಾಮಗಾರಿ ಸಂಬಂದವಾಗಿ ಕೆಲಸ ಪ್ರಾರಂಭವಾಗಿದಿಯೋ ಇಲ್ಲವೋ ಹಾಗೂ ಕಾಮಗಾರಿ ನಡೆದಿದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲಿಸಿರುತ್ತಾರೆ. ಅದೇ ರೀತಿ ಪಿ.ಡಿ.ಓ ರವರು ಸ್ಥಳದಲ್ಲಿ ಎಷ್ಟು ಕೂಲಿಕಾರ್ಮಿಕರು ಹಾಜರಿದ್ದಾರೆ ಎಂಬುವುದನ್ನು ಸಹ ದಾಖಲಿಸಿಕೊಳ್ಳುತ್ತಾರೆ. ಸ್ಯಾಂಕ್ಷನ್ ಆದ ಹಣದಲ್ಲಿ ಶೇಖಡಾ 40 ರಷ್ಟು ಸಾಮುಗ್ರಿಗಳಿಗೆ ಹಾಗೂ ಶೇಖಡಾ 60 ರಷ್ಟು ಕೂಲಿ ಕಾರ್ಮಿಕರಿಗೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಸಾಮುಗ್ರಿ ಖರೀದಿಯಲ್ಲಿ ಯಾವುದೇ ಅಪರಾ ತಪರಾ ಆಗಿರುವುದು ಕಂಡುಬಂದಿರುವುದಿಲ್ಲ. ಸಾಮಾನ್ಯವಾಗಿ ಪ್ರಕರಣದ ಸಮಯದಲ್ಲಿ ಕೂಲಿಕಾರ್ಮಿಕರ ಜಂಟಿ ಕುಟುಂಬದ ಸದಸ್ಯನಾದಲ್ಲಿ ಆ ಕುಟುಂಬದ ಓರ್ವ ವ್ಯಕ್ತಿಯ ಖಾತೆಗೆ ಕೂಲಿ ಹಣ ಸಂದಾಯ ಮಾಡುವ ಅವಕಾಶ ಇತ್ತು ಎಂದರೆ ಸರಿ. ಈ ಪ್ರಕರಣದಲ್ಲಿ ಒಂದೊಂದು ಕುಟುಂಬದ ಎಷ್ಟು ಸದಸ್ಯರು ಕೂಲಿ ಕಾರ್ಮಿಕರು ಆಗಿದ್ದರು ಎಂದು ಪರೀಶಿಲಿಸಿರುವುದಿಲ್ಲ. ಈ ರೀತಿ ಪರಿಶೀಲನೆ ಮಾಡಿದರೆ ಮಾತ್ರ ಅಪರಾ ತಪರಾ ಆಗಿದಿಯೋ ಇಲ್ಲವೋ ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಕೂಲಿ ಕಾರ್ಮಿಕರು ಪ್ರತ್ಯೇಕವಾಗಿ ಯಾವ ಯಾವ ಮನೆತನಗಳಿಗೆ ಸೇರಿದವರು ಎಂದು ಮತ್ತು ಅವರ ಪೈಕಿ ಯಾವ

ಮುಖ್ಯಸ್ಥರಿಗೆ ವೇತನ ಚೆಕ್ ಮೂಲಕ ಸಂದಾಯ ಆಗಿದೆ ಎಂದು ಹೇಳಲಾಗುತ್ತಾ ಎಂದರೆ ಸಾಕ್ಷಿ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಸಂಪೂರ್ಣ ಆದ ನಂತರ ತಾಲ್ಲೂಕಾ ಪಂಚಾಯತ ಇಂಜೇನೀಯರ್ ಇವರು ಸ್ಥಳಕ್ಕೆ ಭೇಟಿ ನೀಡಿ ಮೊದಲು ಕೆಲಸ ಆಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಎಷ್ಟು ಉದ್ದ ಮತ್ತು ಎಷ್ಟು ಅಗಲ ರಸ್ತೆ ನಿರ್ಮಾಣ ಆಗಿದೆ ಎನ್ನುವ ಬಗ್ಗೆ ಅಳತೆಯನ್ನು ದಾಖಲಿಸಿಕೊಳ್ಳುತ್ತಾರೆ. ನಂತರ ಅವರು ರಸ್ತೆ ನಿರ್ಮಾಣ ಕಾರ್ಯ ಆಗಿದೆ ಸಂಬಂದಪಟ್ಟ ಕೂಲಿಕಾರರಿಗೆ ಅವರವರ ವೇತನವನ್ನು ನೀಡಲು ಆದೇಶವನ್ನು ಹೊರಡಿಸುತ್ತಾರೆ. ಈ ರೀತಿ ಮಾಡಿದ ಆದೇಶ ಸದರಿ ಪ್ರಕರಣದ ಕಡತಗಳಲ್ಲಿ ಲಭ್ಯ ಇದೆ. ಸದರಿ ಆದೇಶದ ಪ್ರಕಾರ ಕೂಲಿಕಾರ್ಮಿಕರಿಗೆ ಕೂಲಿ ಹಣ ಪಾವತಿ ಆಗಿದಿಯೂ ಎಂದರೆ ಸಾಕ್ಷಿ ಕೆಲವು ಕೂಲಿ ಕಾರ್ಮಿಕರಿಗೆ ಆಗಿದೆ ಆದರೆ ಕೆಲವರಿಗೆ ಆಗಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಕೆಲವು ಕೂಲಿ ಕಾರ್ಮಿಕರಿಗೆ ಹಣ ಪಾವತಿ ಆಗಿರುವ ಬಗ್ಗೆ ಹಾಗೂ ಕೆಲ ಕೂಲಿಕಾರ್ಮಿಕರಿಗೆ ಹಣ ಪಾವತಿ ಆಗದೇ ಇರುವ ಬಗ್ಗೆ ದಾಖಲೆ ಪ್ರಕರಣದ ಕಡತಗಳಲ್ಲಿ ಲಭ್ಯ ಇದೆ.

ಕೂಲಿ ಕಾರ್ಮಿಕರಿಗೆ ಪಾವತಿ ಆಗದ ಹಣ ಏನಾಯಿತು ಎಂದರೆ ಸಾಕ್ಷಿ ಪಾವತಿ ಆಗದ ಹಣವನ್ನು ಆರೋಪಿತರು ಆದ ಪಿ.ಡಿ.ಓ ಮತ್ತು ಗ್ರಾಮ ಪಂಚಾಯತ ಅಧ್ಯಕ್ಷರು ಬೇರೆಯವರ ಹೆಸರಿನಲ್ಲಿ ಮಂಜೂರು ಮಾಡಿ ತೆಗೆದುಕೊಂಡು ತಾವು ಬಳಸಿಕೊಂಡಿರುತ್ತಾರೆ. ಬೇರೆಯವರ ಹೆಸರಿನಲ್ಲಿ ಮಂಜೂರು ಮಾಡಿ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ರೀತಿ ಪಿ.ಡಿ.ಓ ಮತ್ತು ಗ್ರಾಮ ಪಂಚಾಯತ ಅಧ್ಯಕ್ಷರು ಯಾರ ಯಾರ ಕೂಲಿ ಪಾವತಿ ಬಾಕಿ ಇತ್ತು ಮತ್ತು ಅದನ್ನು ಯಾರ ಹೆಸರಿಗೆ ಹಾಕಿ ತೆಗೆದು ಬಳಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಎನ್.ಎಮ್ಆರ್ ರಡಿಯಲ್ಲಿ ಸುಮಾರು 200 ಕೂಲಿ ಕಾರ್ಮಿಕರು ಬಾಗವಹಿಸಿದ್ದು ಅವರ ಪ್ರತ್ಯೇಕ ಹೆಸರನ್ನು ಈಗ ಹೇಳಲಾಗುವುದಿಲ್ಲ. ಸದರಿ 200 ಕೂಲಿ ಕಾರ್ಮಿಕರ ಪಟ್ಟಿ ಪ್ರಕರಣದ ಕಡತದಲ್ಲಿ ಲಭ್ಯ ಇದೆ. ಸದರಿ ಕೂಲಿ ಕಾರರ ಪೈಕಿ ಹಣ ಸಂದಾಯವಾಗದೇ ಇರುವ ಕೂಲಿ ಕಾರ್ಮಿಕರು ಆ ಬಗ್ಗೆ ದೂರನ್ನು ನೀಡಿದ್ದಾರಾ ಎಂದರೆ ಸಾಕ್ಷಿ ಸಿ.ಇ.ಓ ಜಿಲ್ಲಾ ಪಂಚಾಯತ ಇವರಿಗೆ ದೂರು ನೀಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ಈ ಪ್ರಕರಣದ ಕಡತದಲ್ಲಿ ಹಾಜರು ಮಾಡಿರುತ್ತಾರೆ.

2 ಮತ್ತು 15 ನೇ ಆರೋಪಿತರು ಗ್ರಾಮ ಪಂಚಾಯತ ಅಧ್ಯಕ್ಷರುಗಳು ಬೇರೆ ಕೂಲಿ ಕಾರ್ಮಿಕರ ಹೆಸರಿನಲ್ಲಿ ಹಣವನ್ನು ತೆಗೆದು ತಮ್ಮ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಗ್ರಾಮ

ಪಂಚಾಯತಗೆ ಅನಕ್ಷರಸ್ಥರು ಸಹ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ ಎಂದರೆ ಸರಿ. ಈ ರೀತಿ ಅನಕ್ಷರಸ್ಥರು ಅಧ್ಯಕ್ಷರಾಗಿ ನೇಮಕಗೊಂಡಾಗ ಅವರಿಗೆ ಸದರಿ ಗ್ರಾಮ ಪಂಚಾಯತಿಯ ಪಿ.ಡಿ.ಓ ರವರು ಮಾರ್ಗದರ್ಶನ ನೀಡುತ್ತಾರೆ. ಈ ಹಿಂದೆ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಕೂಲಿಕಾರರ ಕೂಲಿಯನ್ನು ವಿಲೇವಾರಿಯಾದ ಬಗ್ಗೆ ಅಧ್ಯಕ್ಷರೆ ಸ್ವತಃ ಭಾಗವಹಿಸಿ ವಿಚಾರಿಸಬೇಕು ಎಂಬುವುದು ನಿಯಮಾವಳಿಗಳಲ್ಲಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಂದು ಕಾಮಗಾರಿಗೆ ಸಂದಂದಪಟ್ಟ ಹಾಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಸಂಬಂದಪಟ್ಟ ಪಂಚಾಯತ ಅಧ್ಯಕ್ಷರ ಕರ್ತವ್ಯ ಅಲ್ಲಿಗೆ ಮುಕ್ತಾಯಗೊಳ್ಳುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಕಾಮಗಾರಿಗೆ ಸಂಬಂಧಪಟ್ಟ ಹಾಗೆ ಕೂಲಿಕಾರರಿಗೆ ನೇಮಕ ಮಾಡುವುದು ಮತ್ತು ಕೆಲಸ ಮಾಡಿಸುವುದು ಅದೇ ರೀತಿ ಕೂಲಿ ಹಣ ಬಿಡುಗಡೆ ಮಾಡುವುದು ಚುನಾವಯಿತ ಅಧ್ಯಕ್ಷರ ಕೆಲಸವಾಗಿರುವುದಿಲ್ಲ ಎಂದರೆ ಸಾಕ್ಷಿ ಸದರಿ ಕೆಲಸ ಅಧ್ಯಕ್ಷರೊಬ್ಬರದ್ದೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕೆಲಸ ಅಧ್ಯಕ್ಷರದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದ 2 ಮತ್ತು 15 ನೇ ಆರೋಪಿತರು ಗ್ರಾಮ ಪಂಚಾಯತನ ಅಧ್ಯಕ್ಷರುಗಳು ಆಗಿದ್ದರು ಎಂದರೆ ಸರಿ. 2 ಮತ್ತು 15 ನೇ ಆರೋಪಿತರು ಅನಕ್ಷರಸ್ಥರು ಎಂದರೆ ನನಗೆ ಗೊತ್ತಿಲ್ಲ. ನಾನು ದೂರು ನೀಡುವ ಮುನ್ನ ಚೆಕ್ಕುಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಪರಿಶೀಲಿಸಿದ ಚೆಕ್ಕುಗಳ ಪೈಕಿ ಕೆಲವು ಚೆಕ್ಕುಗಳ ಮೇಲೆ ಅಧ್ಯಕ್ಷರ ಹೆಬ್ಬೆಟ್ಟು ಮತ್ತು ಕೆಲವು ಚೆಕ್ಕುಗಳ ಮೇಲೆ ಅಧ್ಯಕ್ಷರ ಸಹಿ ಇತ್ತು. ನಾನು ಯಾವುದೇ ಚೆಕ್ಕುಗಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿತಳು ದಿನಾಂಕಃ 16.06.2010 ರಿಂದ ಈ ಪ್ರಕರಣದ ದೂರು ದಾಖಲಾಗುವವರೆಗೂ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 15 ನೇ ಆರೋಪಿತಳು ದಿನಾಂಕಃ 09.12.2009 ರಿಂದ 28.08.2010 ರವರೆಗೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೊದಲು 15 ನೇ ಆರೋಪಿ ಅಧ್ಯಕ್ಷಳಾಗಿ ಸೇವೆ ಸಲ್ಲಿಸಿದ ನಂತರ 2 ನೇ ಆರೋಪಿ ಅಧ್ಯಕ್ಷಳು ಆಗಿರುತ್ತಾರೆ. 15 ನೇ ಆರೋಪಿತಳ ಅಧ್ಯಕ್ಷತೆ ಅವಧಿ ಮುಗಿದ ನಂತರ 2 ನೇ ಆರೋಪಿತಳು ಅಧ್ಯಕ್ಷಳಾಗಿ ಆಯ್ಕೆಯಾಗಿ ಕೆಲಸ ಮಾಡಿರುತ್ತಾಳೆ.

ಹಿರೇಬೂದಿಹಾಳದಿಂದ ಗುರುವಿನಹಳ್ಳಿ ರಸ್ತೆಗೆ ರೂ.5,00,000/- ಫಂಡ್ಸ ಸ್ಯಾಂಕ್ಷನ್ ಆಗಿದ್ದು ಆ ಪೈಕಿ ಎಷ್ಟು ಖರ್ಚು ಆಗಿದೆ ಎಂದು ಇಂಜನೀಯರ್ ಗೆ ಗೊತ್ತು. ಆ ಸಮಯದಲ್ಲಿ ಶ್ರೀ ವಿ.ಎಮ್. ತಿರಕನಗೌಡರು 5 ನೇ ಆರೋಪಿ ಇಂಜನೀಯರ್ ಆಗಿದ್ದರು. 5 ನೇ ಆರೋಪಿಗೆ ನಾನು ಮೇಲಾಧಿಕಾರಿಯಾಗಿ ಕಾಮಗಾರಿ ಬಗ್ಗೆ ವಿಚಾರಿಸಿರುತ್ತೇನೆ. ಎಷ್ಟು ಕೂಲಿಕಾರರು ಕೆಲಸ ಮಾಡಿರುಬ ಬಗ್ಗೆ ಬಂತು ಎಂದರೆ ಸಾಕ್ಷಿ ಅದು ಎನ್.ಎಮ್.ಆರ್. ಅಲ್ಲಿ

ನಮೂದು ಇರುತ್ತದೆ. ಈಗ ನನಗೆ ನೆನಪು ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಕೆಲಸ ಮಾಡಿದ ಕೂಲಿಕಾರರಿಗೆ ವೇತನ ಪಾವತಿಯಾಗಿದೆಯಾ ಎಂದರೆ ಸಾಕ್ಷಿ ಅಪೂರ್ಣ ಪಾವತಿಯಾಗಿದೆ ಎಂದು ನುಡಿಯುತ್ತಾರೆ. ಎಷ್ಟು ಹಣ ಪಾವತಿಯಾಗಿದೆ ಎಷ್ಟು ಹಣ ಪಾವತಿಯಾಗಿಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ರಸ್ತೆ ಕಾಮಗಾರಿ ಆಗಿದೆಯೋ ಅಥವಾ ಇಲ್ಲವೊ ಎಂದರೆ ಸಾಕ್ಷಿ ಅಪೂರ್ಣ ಆಗಿದೆ ಎಂದು ನುಡಿದು ಮುಂದುವರೆದು ಮಿಷಿನರಿಗಳನ್ನು ಬಳಸಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಕೆಲಸಕ್ಕೆ ಯಾವ ಯಾವ ಮಿಷಿನರಿಗಳನ್ನು ಬಳಸಿ ರಸ್ತೆ ನಿರ್ಮಾಣ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ. ಈ ರೀತಿ ಮಿಷಿನರಿ ಬಳಸಿ ಕೆಲಸ ಮಾಡಿಸಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ರಸ್ತೆ ಕಾಮಗಾರಿ ಎಷ್ಟು ಹಣಕ್ಕೆ ಸಂಬಂದಪಟ್ಟ ಹಾಗೆ ಅಪೂರ್ಣ ಹಾಗೂ ಎಷ್ಟು ಹಣಕ್ಕೆ ಸಂಬಂದಪಟ್ಟ ಹಾಗೆ ಸಂಪೂರ್ಣ ಆಗಿದೆ ಎಂದರೆ ಸಾಕ್ಷಿ ಅದು ಎನ್.ಎಮ್.ಆರ್. ನಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು ಈಗ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎನ್.ಎಮ್.ಆರ್. ರಡಿಯಲ್ಲಿ ಆಗುವ ಕೆಲಸದ ವಿಚಾರಣೆಯನ್ನು ನಾನು ಮೇಲ್ವಿಚಾರಕನಾಗಿ ವಿಚಾರಿಸಬೇಕಾಗಿರುತ್ತದೆ ಎಂದರೆ ಭಾಗಶಃ ಮಾತ್ರ ನನ್ನ ಕರ್ತವ್ಯ ಎಂದು ನುಡಿಯುತ್ತಾರೆ. ಮೇಲ್ವಿಚಾರಣೆ ಮಾಡುವುದು ನನ್ನ ಸಂಪೂರ್ಣ ಕರ್ತವ್ಯ ಆಗಿರುತ್ತದೆ ಎಂದರೆ ಸರಿಯಲ್ಲ. ಯಾವ ಯಾವ ರಸ್ತೆ ಕುರಿತಂತೆ ನಾನು ಭಾಗಶಃ ಪರಿಶೀಲನೆ ಮಾಡಿದ್ದೇನೆ ಎಂಬ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎನ್.ಎಮ್.ಆರ್. ರಡಿಯಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟಹಾಗೆ ಎಲ್ಲ ರಸ್ತೆಗಳು ನಿರ್ಮಾಣವಾಗಿವೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಹಿರೇಬೂದಿಹಾಳ ಮತ್ತಿಗಟ್ಟಿ ಸಂಬಂದಪಟ್ಟ ಹಾಗೆ ಕೆಲಸ ಅಪೂರ್ಣವಾಗಿರುತ್ತದೆ. ಈ ರಸ್ತೆಯ ಬಗ್ಗೆ ನಾನು ಮೇಲ್ವಿಚಾರಣೆ ಮಾಡಿರುತ್ತೇನೆ.

ಕೂಲಿಕಾರರ ನೇಮಕ ಮಾಡಿರುವ ಬಗ್ಗೆ ಎನ್.ಎಮ್.ಆರ್. ನಲ್ಲಿ ಕೂಲಿಕಾರರ ಪಟ್ಟಿ ಮಾಡಿರುತ್ತಾರೆ. ಅದನ್ನು ನಮಗೆ ಉದ್ಯೋಗ ಮಿತ್ರ ಎಂಬ ನಿಯೋಜಿತ ಕೆಲಸಗಾರರು ಪೂರೈಸುತ್ತಾರೆ. ಈ ಕಾಮಗಾರಿಗೆ ಸಂಬಂದಪಟ್ಟ ಹಾಗೆ ಅವರು ಕೂಲಿಕಾರರ ಪಟ್ಟಿಯನ್ನು ಸಲ್ಲಿಸಿದ್ದು ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ.

ಹಿರೇಬೂದಿಹಾಳ ವಾಯಾ ನೆಲಗುಡ್ಡದಿಂದ ತರ್ಲಘಟ್ಟ ರಸ್ತೆ ಕಾಮಗಾರಿ ಅಪೂರ್ಣವಾಗಿದೆ. ಅದನ್ನು ನಾನು ಪರಿಶೀಲನೆ ಮಾಡಿದ್ದೇನೆ. ಸದರಿ ರಸ್ತೆ ಎಷ್ಟು ದುಡ್ಡು ಖರ್ಚು ಮಾಡಿ ಮಾಡಲಾಗಿದೆ ಎಂದರೆ ರೂ.7,95,843/- ಖರ್ಚು ಮಾಡಿ ಮಾಡಲಾಗಿದೆ. ಇಷ್ಟೇ ಖರ್ಚಾಗಿದೆ ಎಂಬ ಮಾಹಿತಿಯನ್ನು ಇಂಜಿನೀಯರ್ ಇವರು ವರದಿಯಲ್ಲಿ ಉಲ್ಲೇಖ ಮಾಡಿರುತ್ತಾರೆ. ಈ ರಸ್ತೆ ನಿರ್ಮಾಣದ ಸಂಬಂದ ಎಷ್ಟು ಕೂಲಿಕಾರರು ನೇಮಕವಾಗಿದ್ದರು

ಎಂದರೆ ಸಾಕ್ಷಿ ನೇಮಕ ಆದವರು ಎನ್.ಎಮ್.ಆರ್. ನ ಪ್ರಕಾರ 118 ಇರುತ್ತಾರೆ. ಸಾಕ್ಷಿ ಮುಂದುವರೆದು ವೇತನ 06 ಜನರಿಗೆ ಮಾತ್ರ ಸಂದಾಯ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ವೇತನ ಕೇವಲ 06 ಜನರಿಗೆ ಮಾತ್ರ ಸಂದಾಯವಾಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಉಳಿದ ಕೂಲಿಕಾರ್ಮಿಕರಿಗೆ ಕೂಲಿ ಹಣ ಸಂದಾಯವಾಗದೇ ಇರುವ ಬಗ್ಗೆ ದೂರು ನನಗೆ ನೀಡಿರುವುದಿಲ್ಲ ಆದರೆ ಸಿ.ಇ.ಓ, ಜಿಲ್ಲಾ ಪಂಚಾಯತ ಇವರಿಗೆ ನೀಡಿರುತ್ತಾರೆ. ಹಣ ಸಂದಾಯವಾಗಿಲ್ಲ ಎಂದು ಯಾವುದೇ ಕೂಲಿಕಾರರು ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಹಿರೇಬೂದಿಹಾಳ ಇಂಗಳಗಿ ತರ್ಲಘಟ್ಟ ರಸ್ತೆಗೆ ರೂ.10,00,000/- ಹಣ ಮಂಜೂರು ಆಗಿರುತ್ತದೆ. ಆ ಪೈಕಿ ರೂ.7,95,843/- ಮಾತ್ರ ಖರ್ಚಾಗಿರುತ್ತದೆ. ಬಾಕಿ ಹಣ ಪಂಚಾಯತನಲ್ಲಿ ಜಮಾ ಇದೆ. ಈ ರಸ್ತೆ ಕಾಮಗಾರಿಗೆ ಸಂಬಂದಪಟ್ಟಹಾಗೆ ಎನಿ.ಎಮಿ.ಆರ್.-17 ರಲ್ಲಿ 118 ಜನ ನೇಮಕವಾಗಿದ್ದರು. ಎನ್.ಎಮ್.ಆರ್-269 ರಲ್ಲಿ 150 ಜನ ಕೂಲಿಕಾರ್ಮಿಕರು ನೇಮಕವಾಗಿದ್ದರು. ಈ ಎಲ್ಲ ವಿವರಗಳನ್ನು ನಾನು ನನ್ನ ಬಳಿ ಲಭ್ಯ ಇರುವ ಕಡತವನ್ನು ನೋಡಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ. ನೇಮಕವಾದ ಕಾರ್ಮಿಕರ ಪಟ್ಟಿ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಪಂಚಾಯತನಲ್ಲಿ ಇದೆ ಎಂದು ನುಡಿಯುತ್ತಾರೆ. ಈ ದೂರು ನೀಡುವ ಮುನ್ನ ಕೂಲಿಕಾರರ ಪಟ್ಟಿಯನ್ನು ನಾನು ಪಡೆದಿರುವುದಿಲ್ಲ, ಅದನ್ನು ಜಿಲ್ಲಾ ಪಂಚಾಯತ ಇವರು ನಿಯೋಜಿಸಿದ ತನಿಖಾಧಿಕಾರಿ ಇವರು ಪಡೆದಿರುತ್ತಾರೆ. ಅದನ್ನು ಈ ಪ್ರಕರಣದಲ್ಲಿ ಹಾಜರುಮಾಡಿದ್ದಾರೆ. ಹಣ ಪಾವತಿಯಾಗದೇ ಇರುವ ಬಗ್ಗೆ ಕೂಲಿ ಕಾರ್ಮಿಕರು ದೂರನ್ನು ನನಗೆ ನೀಡಿರುವುದಿಲ್ಲ ಆದರೆ ಸಿ.ಇ.ಓ ಜಿಲ್ಲಾ ಪಂಚಾಯತ ಇವರಿಗೆ ನೀಡಿರುತ್ತಾರೆ. ಕೂಲಿಕಾರರು ಹಣ ಸಂದಾಯವಾಗದೇ ಇರುವ ಬಗ್ಗೆ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಹಿರೇಬೂದಿಹಾಳ ಇಂಗಳಗಿ ಬಸನಾಳ ರಸ್ತೆಗೆ ಹಣ ಮಂಜೂರಾತಿಯಾಗದೇ ರಸ್ತೆ ಕಾಮಗಾರಿ ಮಾಡಿರುತ್ತಾರೆ. ಸದರಿ ಮಾರ್ಗದ ರಸ್ತೆ ನಮ್ಮ ಆ್ಯಕ್ಷನ್ ಪ್ಲಾನ್ ನಲ್ಲಿ ಉಲ್ಲೇಖ ಇರುವುದಿಲ್ಲ. ಸಾಮಾನ್ಯವಾಗಿ ಗ್ರಾಮ ಪಂಚಾಯತ ಇವರು ತರ್ತು ಇದ್ದರೆ ರಸ್ತೆ ಕಾಮಗಾರಿಗಳನ್ನು ಮಾಡಿಸಬಹುದಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ರಸ್ತೆ ಆಗಿದೆಯೋ ಇಲ್ಲವೋ ಎಂದು ಸ್ಥಳಕ್ಕೆ ಹೋಗಿ ನೋಡಿರುತ್ತೇನೆ. ರಸ್ತೆ ಆಗಿದೆ ಆದರೆ ಅಪೂರ್ಣವಾಗಿದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಕಾಮಗಾರಿ ರೂ.70,658/- ಯಷ್ಟು ಕೆಲಸವಾಗಿದೆ. ತುರ್ತು ಕೆಲಸ ಪೂರ್ಣಗೊಳಿಸಿ ನಂತರ ಅನುಮೋದನೆ ಪಡೆಯುವ ಸೌಲಭ್ಯ

ಇರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮಸಭೆಯವರು ಯಾವ ಯಾವ ರಸ್ತೆ ಕಾಮಗಾರಿ ಮಾಡಿಸುವುದು ಎಂದು ಗುರುತಿಸುತ್ತಾರೆ ಎಂದರೆ ಸರಿ.

ಎನ್.ಎಮ್.ಆರ್-17 ರಲ್ಲಿ ಎಷ್ಟು ಕೂಲಿಕಾರರ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ 118 ಎಂದು ನುಡಿಯುತ್ತಾರೆ. ಅವರ ಹೆಸರುಗಳನ್ನು ಎನ್.ಎಮ್.ಆರ್. ಮುಖಾಂತರ ನ್ಯಾಯಾಲಯಕ್ಕೆ ಪೂರೈಸಿರುತ್ತೇನೆ. ಎನ್.ಎಮ್.ಆರ್. ಪ್ರಕಾರ ಸದರಿ 118 ಕೂಲಿಕಾರರು ಕೆಲಸ ಮಾಡಿರುವ ಬಗ್ಗೆ ಕಂಡುಬಂದಿರುತ್ತದೆ. ಅವರು ಹಣ ಸಂದಾಯ ಆಗದೇ ಇರುವ ಬಗ್ಗೆ ತಮಗೆ ಯಾವುದೇ ದೂರು ನೀಡಿಲ್ಲ. ಎನ್.ಎಮ್.ಆರ್.17 ಕುರಿತಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರಿ ಸರಿಯಲ್ಲ.

ಅದೇ ಪ್ರಕಾರ ಎನ್.ಎಮ್.ಆರ್-269 ರಲ್ಲಿ ಎಷ್ಟು ಕೂಲಿಕಾರರ ಹೆಸರು ಇದೆ ಎಂದರೆ ಸಾಕ್ಷಿ 150 ಎಂದು ನುಡಿಯುತ್ತಾರೆ. ಈ ಯೋಜನೆಯಲ್ಲಿ ಕೆಲಸವಾಗಿದೆ. ಆ ಕೂಲಿಕಾರರ ಪೈಕಿ ಕೇವಲ 05 ಜನರಿಗೆ ಮಾತ್ರ ಕೂಲಿ ಹಣ ನೀಡಲಾಗಿದೆ. ಉಳಿದವರು ಕೂಲಿ ಹಣ ನೀಡದೇ ಇರುವ ಬಗ್ಗೆ ನನಗೆ ದೂರು ನೀಡಿಲ್ಲ. ನಾನು ಎನ್.ಎಮ್.ಆರ್-269 ರಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎನ್.ಎಮ್.ಆರ್ ಗಳ ಕುರಿತು ನೀಡಿದ ಅಂಕಿ-ಅಂಶ ಹಾಗೂ ವಿವರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ತನಿಖಾಧಿಕಾರಿ ನಾನು ದೂರು ದಾಖಲಿಸುವ 15 ದಿನಗಳ ಮುನ್ನ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ತನಿಖಾಧಿಕಾರಿ ದೂರು ದಾಖಲಿಸಿಕೊಂಡ ನಂತರ ನನ್ನ ಯಾವುದೇ ಹೇಳಿಕೆ ದಾಖಲಿಸಿಕೊಂಡಿರುವುದಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೂಲಿಕಾರರು ಸಂಘ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಪ್ರಕಾರ ಕೂಲಿ ಕೆಲಸಕ್ಕೆ ಬಂದ ಎಲ್ಲ ಕೂಲಿಕಾರರಿಗೆ ಉಳಿತಾಯ ಖಾತೆ ಇರುವುದಿಲ್ಲ ಎಂದರೆ ಸಾಕ್ಷಿ ಇರಲೇಬೇಕಾಗುತ್ತದೆ ಎಂದು ನುಡಿಯುತ್ತಾರೆ. ಬ್ಯಾಂಕ್ ಖಾತೆ ಇಲ್ಲದ ಕೂಲಿಕಾರರಿಗೆ ವಾಪಸ್ಸು ಕಳಿಸುತ್ತೀರಾ ಎಂದರೆ ಇಲ್ಲ, ಕೆಲಸ ಮಾಡಲು ಅನುಮತಿ ನೀಡುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿ ಖಾತೆ ಇರದ ಕೂಲಿ ಕಾರ್ಮಿಕರು ಮಾಡಿದ ಕೆಲಸದ ಕೂಲಿಯನ್ನು ಅವರ ಹೆಸರಿನಿಂದ ಬೇರೊಂದು ಕೂಲಿಕಾರರ ಖಾತೆಗೆ ಜಮಾ ಮಾಡುತ್ತೀರಾ ಎಂದರೆ ಸಾಕ್ಷಿ ಅವರಿಗೆ ಬ್ಯಾಂಕ್ ನಲ್ಲಿ ಖಾತೆ ಮಾಡಲು ಒಂದು ವಾರ ಸಮಯ ನೀಡುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿ ನಿಗದಿತ ಸಮಯದಲ್ಲಿ ಆ ಕೂಲಿಕಾರರ ಬ್ಯಾಂಕ್ ನಲ್ಲಿ ಖಾತೆ ಮಾಡಿಸದೇ ಇದ್ದಾಗ ಆ ಬಗ್ಗೆ ಪಂಚಾಯತ ಇವರು ನಿರ್ಣಯ ತೆಗೆದುಕೊಳ್ಳುತ್ತಾರೆ. ಪಂಚಾಯತಿಗೆ ಖಾತೆ ಹೊಂದದ ಕೂಲಿಕಾರರ ಇಂತಹ ವ್ಯಕ್ತಿಯ ಖಾತೆಗೆ ಜಮಾ ಮಾಡಿ ಎಂದು ಹೇಳಿದಾಗ ಆ ರೀತಿ ಪಂಚಾಯತನವರು ಕೂಲಿ ಹಣ ಪಾವತಿಸುತ್ತಾರಾ ಎಂದರೆ ಸಾಕ್ಷಿ ಅದಕ್ಕೆ ಅವಕಾಶ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು

ಕಡ್ಡಾಯವಾಗಿ ಖಾತೆ ಮಾಡಿಸಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ಖಾತೆ ಮಾಡಿಸದ ಕೂಲಿಕಾರರಿಗೆ ಸಂಬಂದಪಟ್ಟಹಾಗೆ ಎಷ್ಟು ಹಣ ಪಾವತಿಯಾಗದೇ ಉಳಿದುಕೊಂಡಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆಲಸ ಮಾಡಿದ ಎಲ್ಲ ಕೂಕಿಕಾರರಿಗೂ ಕೂಲಿ ಹಣ ಪಾವತಿಯಾಗಿದೆ ಎಂದರೆ ಸರಿಯಲ್ಲ. ನನಗೆ ಕೂಲಿ ಹಣ ಬಾಕಿ ಇದೆ ಎಂದು ಹೇಳಿ ಕೂಲಿಕಾರರು ಯಾರೂ ದೂರು ನೀಡಿಲ್ಲ. ಚೆಕ್ಕುಗಳ ಮೇಲಿನ ಸಹಿಗಳು 2 ಮತ್ತು 15 ನೇ ಆರೋಪಿತರ ಸಹಿಗಳಾ ಎಂದು ತಜ್ಞರ ಅಭಿಪ್ರಾಯ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸದರಿ ಪ್ರಕರಣದಲ್ಲಿ ಹಣದ ಯಾವುದೇ ವಂಚನೆ ಮತ್ತು ಅಪರಾ ತಪರಾವನ್ನು 2 ಮತ್ತು 15 ನೇ ಆರೋಪಿತರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಮಾಡದೇ ಇದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ 2 ಮತ್ತು 15 ನೇ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎ ಆರ್ ಕೆ ವಕೀಲರಿಂದ 3 ನೇ ಆರೋಪಿ ಪರ ವಕೀಲರುಃ</u>**

ಕಾರ್ಯದರ್ಶಿ ಇವರು ಪಿ.ಡಿ.ಓ ಮತ್ತು ಅಧ್ಯಕ್ಷರ ಆದೀನ ಕೆಲಸ ಮಾಡುತ್ತಾರೆ ಎಂದರೆ ಸರಿ. ಕಾರ್ಯದರ್ಶಿ ಇವರು ಪಿ.ಡಿ.ಓ, ಇ.ಓ ಮತ್ತು ಸಿ.ಇ.ಓ ಜಿಲ್ಲಾ ಪಂಚಾಯತ ನಿರ್ದೇಶನದ ಪ್ರಕಾರ ಕರ್ತವ್ಯ ನಿರ್ವಹಿಸುತ್ತಾರೆ ಎಂದರೆ ಸರಿ. ಕಾರ್ಯದರ್ಶಿ ಯಾವುದೇ ಕಾರ್ಯ ನಿರ್ವಹಿಸಿದರು ಅದು ಪಿ.ಡಿ.ಓ., ಇ.ಓ ಮತ್ತು ಸಿ.ಇ.ಓ ಇವರ ಆಜ್ಞೆ ಮೇರೆಗೆ ಆಗಿರುತ್ತದೆ ಎಂದರೆ ಸರಿ. ಹಾಗಾಗಿ ಈ ಪ್ರಕರಣಕ್ಕೆ ಸಂಬಂದಪಟ್ಟಹಾಗೆ ಕಾರ್ಯದರ್ಶಿಯಿಂದ ಯಾವುದೇ ತಪ್ಪು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರ್ಯದರ್ಶಿ ಇವರು ಪಿ.ಡಿ.ಓ, ಇ.ಓ ಹಾಗೂ ಸಿ.ಇ.ಓ ಇವರ ಆದೇಶದ ಪ್ರಕಾರ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ ಎಂದರೆ ಸರಿಯಲ್ಲ. ಕಾರ್ಯದರ್ಶಿ ಇವರು ಪಿ.ಡಿ.ಓ, ಇ.ಓ ಹಾಗೂ ಸಿ.ಇ.ಓ ಇವರ ಆದೇಶದ ಪ್ರಕಾರ ಕರ್ತವ್ಯವನ್ನು ನಿರ್ವಹಿಸಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರಿ ಸರಿಯಲ್ಲ. **(ಈ ಹಂತದಲ್ಲಿ 3 ನೇ ಆರೋಪಿ ಪರ ವಕೀಲರು 2 ಮತ್ತು 15 ನೇ ಆರೋಪಿತರ ಪರ ವಕೀಲರು ಪಿ.ಡಬ್ಲೂ-35 ರವರಿಗೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆಯುವುದಾಗಿ ಸಲ್ಲಿಸಿರುತ್ತಾರೆ.)**

**<u>ಪಾಟೀ ಸವಾಲುಃ ಶ್ರೀ ಎಮ್ ಜಿ ಪಿ ವಕೀಲರಿಂದ 8 ನೇ ಆರೋಪಿ ಪರ ವಕೀಲರುಃ</u>**

ನಾನು ದೂರು ನೀಡುವ ಮುನ್ನ ನಮ್ಮ ಮೇಲಾಧಿಕಾರಿಗಳಿಂದ ಪರವಾನಿಗೆ ಪಡೆದಿರುತ್ತೇನೆ. ಈ ರೀತಿ ಯಾರಿಂದ ಯಾವ ದಿನಾಂಕದಂದು ಪರವಾನಿಗೆ ಪಡೆದಿದ್ದು ಎಂದರೆ

ಸಿ.ಇ.ಓ, ಜಿಲ್ಲಾ ಪಂಚಾಯತ ಇವರಿಂದ ದಿನಾಂಕಃ 27.01.2011 ಹಾಗೂ 04.05.2012 ರಂದು ಪಡೆದಿರುತ್ತೇನೆ. ಪರವಾನಿಗೆಯನ್ನು ಲೇಖನಿ ಮೂಲಕ ನೀಡಿರುತ್ತಾರೆ. ಪರವಾನಿಗೆ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ಪರವಾನಿಗೆ ಪಡೆದಿರುವುದಿಲ್ಲ, ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಆರೋಪಿಗೆ ನ್ಯಾಯಾಲಯದ ಮುಂದೆ ಗುರುತಿಸಲಾಗುತ್ತಾ ಎಂದರೆ ಸಾಕ್ಷಿ ಆಗುವುದಿಲ್ಲ ಎಂದು ನುಡಿದಿದ್ದು ಈ ದಿನ ನ್ಯಾಯಾಲಯದ ಮುಂದೆ 8 ನೇ ಆರೋಪಿ ಹಾಜರಿರುತ್ತಾರೆ. 8 ನೇ ಆರೋಪಿ ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ನಾನು ಅವರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ದುರ್ಬಳಕೆಯಾದ ಬಗ್ಗೆ ದೂರಿನಲ್ಲಿ ಹೇಳಿದ್ದು ಸಂಬಂದಪಟ್ಟ ಹಣವನ್ನು ಸೀಜ್ ಮಾಡಲಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ತನಿಖೆಯಾಗಿದೆ ಎಂದು ನುಡಿದಿರುತ್ತಾರೆ. ದುರ್ಬಳಕೆ ಆಗಿದೆ ಎಂದು ಹೇಳಲಾದ ಹಣವನ್ನು ಸೀಜ್ ಮಾಡಿ ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಯಾವುದೇ ಹಣ ದುರುಪಯೋಗವಾಗದೇ ಇರುವ ಕಾರಣ ಅದನ್ನು ಸೀಜ್ ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಮಗಾರಿಯನ್ನು ಮಿಷಿನರಿ ಬಳಸಿ ಮಾಡಿರುವ ಬಗ್ಗೆ ಹೇಳಿದ್ದು ಆ ರೀತಿ ನಿರ್ದಿಷ್ಟವಾಗಿ ಯಾವ ಸಂಖ್ಯೆಯ ಮಿಷಿನರಿಯನ್ನು ಬಳಸಿ ಕಾಮಗಾರಿ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ. ಮಿಷಿನರಿ ಬಳಸಿದ ಪೈಕಿ ಅವರಿಗೆ ಎಷ್ಟು ಹಣ ಸಂದಾಯವಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ.

ನಾನು ಕೆಲಸ ಅಪೂರ್ಣವಾಗಿರುವ ಬಗ್ಗೆ ಹೇಳಿದ್ದು ಆ ಬಗ್ಗೆ ವರದಿಯನ್ನು ಸಂಬಂದಪಟ್ಟ ಇಂಜಿನೀಯರ್ ಇವರಿಂದ ಪಡೆದಿರುತ್ತೇನೆ. ನಾನು 118 ಮತ್ತು 150 ಕೂಲಿಕಾರ್ಮಿಕರ ಪೈಕಿ ಕೆಲವು ಕೂಲಿ ಕಾರ್ಮಿಕರಿಗೆ ಕೂಲಿ ಹಣ ಪಾವತಿಯಾಗದೇ ಇರುವ ಬಗ್ಗೆ ಹೇಳಿದ್ದು ಆ ರೀತಿ ಪಾವತಿಯಾಗದ ಕೂಲಿಕಾರರ ಹೆಸರುಗಳನ್ನು ನನ್ನ ದೂರಿನಲ್ಲಿ ತೋರಿಸಲು ತೊಂದರೆ ಇರಲಿಲ್ಲ. ಅದನ್ನು ಎನ್.ಎಮ್.ಆರ್. ಮೂಲಕ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ದೂರಿನೊಂದಿಗೆ ಎನ್.ಎಮ್.ಆರ್. ಅಳವಡಿಸಿರುವ ಬಗ್ಗೆ ನಮೂದು ಇದೆ. ಕೂಲಿ ಸಂದಾಯವಾಗದ ಕಾರ್ಮಿಕರ ಹೆಸರು ಹೇಳಲಾಗುವುದಿಲ್ಲ. ಯಾವುದೇ ಅಪರಾಧ ನಡೆಯದೇ ಇದ್ದರೂ ಸಹ, ಯಾವುದೇ ಹಣ ದುರ್ಬಳಕೆ ಆಗದೇ ಇದ್ದರೂ ಸಹ ರಾಜಕೀಯ ಪ್ರಭಾವಕ್ಕೊಳಗಾಗಿ 8 ನೇ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 8 ನೇ ಆರೋಪಿ ಪರ ವಕೀಲರು 2 ಮತ್ತು 15 ನೇ ಆರೋಪಿತರ ಪರ ವಕೀಲರು ಪಿ.ಡಬ್ಲೂ-35 ರವರಿಗೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆಯುವುದಾಗಿ ಸಲ್ಲಿಸಿರುತ್ತಾರೆ.)**

**ಪಾಟೀ ಸವಾಲುಃ ಶ್ರೀ ಎಮ್ ಬಿ ಬಿ ವಕೀಲರಿಂದ 1, 4 ರಿಂದ 6 ಹಾಗೂ 9 ರಿಂದ 14 ನೇ ಆರೋಪಿತರ ಪರ ವಕೀಲರುಃ**

ಎನ್.ಎಮ್.ಆರ್. ಸ್ಕೀಮ್ ಗೆ ಸಂಬಂದಪಟ್ಟ ಸುತ್ತೋಲೆಗಳು ಪ್ರತಿವರ್ಷ ಬದಲಾಗುತ್ತವೆ ಎಂದರೆ ಸರಿ. ಯಾವುದೇ ಕಾಮಗಾರಿ ಮಂಜೂರಾಗಬೇಕಾದರೆ ಅದನ್ನು ಗ್ರಾಮಸಭೆಯಲ್ಲಿ ಠರಾವು ಪಾಸ್ ಮಾಡಬೇಕಾಗಿರುತ್ತದೆ ಎಂದರೆ ಸರಿ. ನಂತರ ಸದರಿ ಠರಾವುನ ಪ್ರತಿ ನಮ್ಮ ಕಚೇರಿಗೆ ಬರುತ್ತದೆ ಎಂದರೆ ಸರಿ. ಕಾರಮಗಾರಿ ಮಂಜೂರು ಮಾಡಲು ನಮಗೆ ವ್ಯಾಪ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಜಿಲ್ಲಾ ಪಂಚಾಯತಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಜಿಲ್ಲಾ ಪಂಚಾಯತ ಇವರು ಅನುಮೋದನೆ ನೀಡುತ್ತಾರೆ. ಉಸ್ತುವಾರಿ ಮಾತ್ರ ನಮ್ಮದು ಎಂದರೆ ಸರಿ. ಸಾಮಾನ್ಯವಾಗಿ ಜಾಗೃತದಳ (Ombudsman) ಜಿಲ್ಲಾ ಪಂಚಾಯತನಲ್ಲಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪಂಚಾಯತಗಳಲ್ಲಿ ಅವ್ಯವಹಾರ ಆದ ಬಗ್ಗೆ ದೂರುಗಳು ಬಂದರೆ ಜಾಗೃತದಳ ಇವರು ತನಿಖೆ ಮಾಡುತ್ತಾರೆ ಎಂದರೆ ಸಾಕ್ಷಿ ಸಿ.ಇ.ಓ, ಜಿಲ್ಲಾ ಪಂಚಾಯತ ಇವರ ಅನುಮೋದನೆ ಮೇರೆಗೆ ತನಿಖೆ ಮಾಡುತ್ತಾರೆ ಎಂದು ನುಡಿಯುತ್ತಾರೆ.

ಆ ತನಿಖೆ ಪ್ರಕಾರ ಅವ್ಯವಹಾರ ಆದ ಹಣದ ವಸೂಲಾತಿ ಬಗ್ಗೆ ಆದೇಶ ಮಾಡುತ್ತಾರೆ ಎಂದರೆ ಸರಿಯಲ್ಲ. ಅವ್ಯವಹಾರ ಆದ ಹಣದ ವಸೂಲಾತಿ ಮಾಡುವ ಅಧಿಕಾರ ಜಾಗೃತದಳಕ್ಕೆ ಇರುತ್ತದೆ ಎಂದರೆ ಸಾಕ್ಷಿ ಈ ಪ್ರಕರಣದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ಸಮಯದಲ್ಲಿ ಜಾಗೃತದಳ ಸ್ಥಾಪನೆಯಾಗಿತ್ತು. ಸದರಿ ಪ್ರಕರಣಕ್ಕೆ ಸಂಬಂದಪಟ್ಟಹಾಗೆ ದೂರನ್ನು ಜಾಗೃತದಳದವರು ನೀಡಿರಲಿಲ್ಲ ಎಂದರೆ ಸರಿ. ಕಾಮಗಾರಿಯ ಪ್ರಕಾರ ಎನ್.ಎಮ್.ಆರ್. ನಲ್ಲಿ ನಮೂದಿಸಿದ ಕೂಲಿಕಾರರರ ಗುಂಪಿನ ಪೈಕಿ ಒಬ್ಬರು ಕೂಲಿಕಾರರು ಉಳಿದ ಕೂಲಿಕಾರರ ಒಪ್ಪಿಗೆ ಮೇರೆಗೆ ಹಣವನ್ನು ಸಂದಾಯ ಮಾಡುವ ವ್ಯವಸ್ಥೆ ಇತ್ತು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಾಮಗಾರಿ ಸಂಪೂರ್ಣಗೊಳಿಸಲು ಕೆಲವು ಕಚ್ಚಾ ವಸ್ತುಗಳನ್ನು ಶೇಖಡಾ 60 ರಷ್ಟು ಕೂಲಿಕಾರ್ಮಿಕರಿಗೆ ಹಾಗೂ 40 ರಷ್ಟು ಸಲಕರಣೆಗೆ ಖರ್ಚ್ ಹಾಕಲು ಅವಕಾಶ ಇರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ರಸ್ತೆ ನಿರ್ಮಾಣ ಮಾಡಿ ಅದರ ಮೇಲೆ ಕೆಂಪು ಮಸಾರಿ ಮಣ್ಣು ಹಾಕಿ ಅದರ ಮೇಲೆ ಕಡೀಕರಣ ಮಾಡಲು ಅವಕಾಶ ಇರುತ್ತದೆ

ಎಂದರೆ ಸರಿ. ಸದರಿ ಕಾಮಗಾರಿಯಡಿಯಲ್ಲಿ ದೂರು ದಾಖಲಿಸುವ ಸಮಯದಲ್ಲಿ ಎಷ್ಟು ಮೀಟರ್ ಉದ್ದ ರಸ್ತೆ ಕೆಲಸ ಸಂಪೂರ್ಣವಾಗಿದೆ ಹಾಗೂ ಎಷ್ಟು ಮೀಟರ್ ಉದ್ದ ರಸ್ತೆ ನಿರ್ಮಾಣ ಮಾಡಲು ಆದೇಶ ಆಗಿತ್ತು ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದ್ದಿ, ಕೂಲಿ ಕಾರರು ಕೆಲಸ ಮಾಡಿ ಆ ಬಗ್ಗೆ ಕೂಲಿ ಹಣ ಪಡೆದಿದ್ದರೂ ಸಹ ನಾನು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪ್ರಕರಣದ ಸಮಯದಲ್ಲಿ ಕೂಲಿಕಾರ್ಮಿಕರ ಜಂಟಿ ಕುಟುಂಬದ ಸದಸ್ಯನಾದಲ್ಲಿ ಆ ಕುಟುಂಬದ ಓರ್ವ ವ್ಯಕ್ತಿಯ ಖಾತೆಗೆ ಕೂಲಿ ಹಣ ಸಂದಾಯ ಮಾಡುವ ಅವಕಾಶ ಇತ್ತು ಎಂದರೆ ಸರಿ. 5 ನೇ ಆರೋಪಿ ಇಲಾಖೆ ಮತ್ತು ನಮ್ಮ ಇಲಾಖೆ ಎರಡೂ ಬೇರೆ ಬೇರೆ ಎಂದರೆ ಸರಿ. ಸದರಿ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಯಾವುದೇ ಮಿಷಿನರಿ ಬಳಸದೇ ಇದ್ದರೂ ಸಹ ಬಳಸಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 5 ನೇ ಆರೋಪಿ ತಾಲ್ಲೂಕು ಪಂಚಾಯತಿ ಕಾಮಗಾರಿ ಉಸ್ತುವಾರಿಯಾಗಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಇಲಾಖೆ ಮತ್ತು ನಮ್ಮ ಇಲಾಖೆ ಬೇರೆ ಎಂದರೆ ಸರಿ. 1 ನೇ ಆರೋಪಿ ಯಾವ ಅವಧಿಯಲ್ಲಿ ಆಡಳಿತಾಧಿಕಾರಿ ಆಗಿದ್ದರು ಎಂದು ನನಗೆ ಗೊತ್ತಿಲ್ಲ. 4 ನೇ ಆರೋಪಿ ಯಾವ ಅವಧಿಯಲ್ಲಿ ಪಿ.ಡಿ.ಓ ಎಂದು ಕರ್ತವ್ಯ ನಿರ್ವಹಿಸಿದ್ದು ಎಂದು ನನಗೆ ಗೊತ್ತಿಲ್ಲ. ಯಾವ ಮಟೀರೀಯಲ್ಸಗಳನ್ನು ಎಲ್ಲಿಂದ ಖರೀದಿ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಭರಮಗೌಡ ದ್ಯಾಮನಗೌಡ್ರ ಇವರ ಹೆಸರಿನಲ್ಲಿ ಚೆಕ್ಕು ಇದ್ದು ಅವರ ವಿರುದ್ಧ ದೂರು ನೀಡುವ ಪ್ರಯತ್ನ ಮಾಡಿರುವುದಿಲ್ಲ. ಎನ್.ಎಮ್.ಆರ್ ಗಳಲ್ಲಿ ಹೆಬ್ಬೆಟ್ಟು ಗುರುತುಗಳಿದ್ದು ಅವುಗಳು ಯಾರಿಗೆ ಸಂಬಂಧಪಟ್ಟಿದ್ದು ಎಂದು ತಜ್ಞರಿಂದ ವರದಿ ಪಡೆದಿರುವುದಿಲ್ಲ. ಸದರಿ ಯೋಜನೆಯಡಿಯಲ್ಲಿ ಕೆಲಸ ಸರಿಯಾಗಿ ಆದ ಕಾರಣ ಹೆಬ್ಬಟ್ಟು ಗುರುತುಗಳ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಎನ್.ಎಮ್.ಆರ್. ಸಂಖ್ಯೆ: 269 ರಲ್ಲಿ 150 ಕೂಲಿಕಾರ್ಮಿಕರ ಹೆಸರುಗಳನ್ನು ದಾಖಲಿಸಿ ಆರೋಪಿ 9 ರಿಂದ 14 ರವರ ಹೆಸರಿಗೆ ಮಾತ್ರ ಚೆಕ್ಕನ್ನು ಭರಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 1, 4 ರಿಂದ 6 ಹಾಗೂ 9 ರಿಂದ 14 ರವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 1, 4 ರಿಂದ 6 ಹಾಗೂ 9 ರಿಂದ 14 ನೇ ಆರೋಪಿ ಪರ ವಕೀಲರು 2 ಮತ್ತು 15 ನೇ ಆರೋಪಿತರ ಪರ ವಕೀಲರು ಪಿ.ಡಬ್ಲೂ-35 ರವರಿಗೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆಯುವುದಾಗಿ ಸಲ್ಲಿಸಿರುತ್ತಾರೆ.)**

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**(ಶ್ರೀಮತಿ ಗಾಯತ್ರಿ)**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿ ಡಬ್ಲೂಃ42 ಪಿ ಡಬ್ಲ್ಯೂಃ36**

**ಹೆಸರುಃ ಗುರುಲಿಂಗಪ್ಪ**

**ತಂದೆ ಹೆಸರುಃ ಗುರುಸಿದ್ಧಪ್ಪ ಮರಿಬಾಶೆಟ್ಟಿ**

**ವಯಸ್ಸುಃ 71 ವರ್ಷಗಳು.**

**ಉದ್ಯೋಗಃ ನಿವೃತ್ತ ಡಿ ವಾಯ್ ಎಸ್ ಪಿ**

**ವಾಸ ಸ್ಥಳಃ ಧಾರವಾಡ**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 15.04.2026**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 27.06.2011 ರಿಂದ 03.10.2013 ರವರೆಗೆ ಕುಂದಗೋಳ ಪೋಲಿಸ ಠಾಣೆಯಲ್ಲಿ ಪೊಲೀಸ ನೀರಿಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 22.05.2012 ರಂದು ಆಗಿನ ಪಿ.ಎಸ್.ಐ ಚಾಸಾಃ41 ರವರು ಸದರಿ ಪ್ರಕರಣಕ್ಕೆ ಸಂಬಂದಪಟ್ಟ ಹಾಗೆ ಗುನ್ನಾ ಜಾಗೆಯ ಪಂಚನಾಮೆಯನ್ನು ಮಾಡಿ ಪ್ರಕರಣವನ್ನು ಚಾಸಾಃ 41 ರವರು ದಾಖಲಿಸಿಕೊಂಡಿರುತ್ತಾರೆ. ಮುಂದೆ ಚಾಸಾಃ 41 ರವರ ವರ್ಗಾವಣೆ ನಿಮಿತ್ಯ ಸದರಿ ಪ್ರಕರಣವನ್ನು ನಾನು ವಹಿಸಿಕೊಂಡಿದ್ದು ನಂತರ ದಿಃ 03.10.2013 ರಂದು ನನ್ನ ಮುಂಬುಡ್ತಿ ಆದ ಕರಣ ಸದರಿ ಪ್ರಕರಣದ ಕಡತಗಳನ್ನು ಚಾಸಾಃ 43 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ 2 ಮತ್ತು 15 ಆರೋಪಿಗಳ ಪರ ವಕೀಲರುಃ**

1. ಚಾಸಾಃ 41 ರವರು ಎಲ್ಲಿಂದ ಎಲ್ಲಿಯವರೆಗೆ ಕುಂದಗೋಳ ಪೊಲಿಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ ಎಂದರೆ ಸಾಕ್ಷಿ 2012 ರಲ್ಲಿ ಎಂದು ನುಡಿಯತ್ತಾರೆ. ನನಗೆ ಯಾವ ತಿಂಗಳವರೆಗೆ ಅಂತಾ ನೆನಪು ಇರುವುದಿಲ್ಲ. ಸದರಿ ಪ್ರಕರಣದ ಕಡತಗಳನ್ನು ಸ್ವಿಕರಿಸಿದ ನಂತರ ನಾನು ಗುನ್ನಾ ಜಾಗೆಗೆ ಭೇಟಿ ನೀಡಿ ದೂರುದಾರಾರ ಹೇಳಿಕೆಯನ್ನು ಪರಿಶೀಲಿಸಿರುವುದಿಲ್ಲ. ನಾನು ಗುನ್ನಾ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ ಆದರೆ ಪಂಚನಾಮೆಯನ್ನು ಮಾತ್ರ ಪರಿಶೀಲಿಸಿರುತ್ತೇನೆ. ಸದರಿ ಪ್ರಕರಿಣದಲ್ಲಿ ನಾನು ಯಾವುದೆ ತನಿಖೆ ಕೈಗೊಂಡಿರುವುದಿಲ್ಲ ಎಂದರ ಸರಿ. ಚಾಸಾಃ 41 ರವರ ಸಮ್ಮುಖದಲ್ಲಿ ಯಾವುದೇ ಫಿರ್ಯಾದು

ದಾಖಲಾಗಿರುವುದಿಲ್ಲ ಹಾಗೂ ಅವರು ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎ ಆರ್ ಕೆ ವಕೀಲರಿಂದ 3 ನೇ ಆರೋಪಿ ಪರ ವಕೀಲರುಃ**

2 ಮತ್ತು 15 ನೇ ಆರೋಪಿಪರ ವಕೀಲರು ಮಾಡಿದ ಪಾಟಿ ಸವಾಲನ್ನು 3 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡು ಮುಂದುವರೆಯುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಮ್ ಬಿ ಬಿ ವಕೀಲರಿಂದ 1, 4 ರಿಂದ 6 ಹಾಗೂ 9 ರಿಂದ 14 ನೇ ಆರೋಪಿಗಳ ಪರ ವಕೀಲರುಃ**

2 ಮತ್ತು 15 ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು 1, 4 ರಿಂದ 6 ಹಾಗೂ 9 ರಿಂದ 14 ಆರೋಪಿ ಪರ ವಕೀಲರು ಅಳವಡಿಸಿಕೊಂಡು ಮುಂದುವರೆಯುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಮ್ ಜಿ ಪಿ ವಕೀಲರಿಂದ 8 ನೇ ಆರೋಪಿ ಪರ ವಕೀಲರುಃ**

2 ಮತ್ತು 15 ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು 8 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡು ಮುಂದುವರೆಯುವುದಾಗಿ ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯಾ ಸಂಪೂರ್ಣ ಪಾಟಿ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**(ಶ್ರೀಮತಿ ಗಾಯತ್ರಿ)**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**